ವಿಫಲಗೊಂಡಿತು. ಆದರೂ ಹತಾಶೆ ಹತ್ತಿಕ್ಕಿ ಮುನ್ನಡೆದ.

ತನ್ನನ್ನು ಹುಡುಕಿ ಯಾರಾದರೂ ಇಂದಲ್ಲ ನಾಳೆ ಬಂದೇ ಬರುತ್ತಾರೆಂಬ ಖಚಿತ ನಂಬಿಕೆ ಅವನಿಗೆ. ಆದರೆ ಅವನಿಗೆದುರಾದ ಮೊದಲ ಸಮಸ್ಯೆ, ಕುಡಿಯುವ ನೀರಿನದು. ಮರುಭೂಮಿಯಲ್ಲಿ ಬಾಯಾರಿ ಸತ್ತವರೆಷ್ಟೋ ಜನ. ಅಲ್ಲಿ ಜೀವಜಲವಿಲ್ಲದಿದ್ದರೆ ಮೂರು ದಿನಗಳೊಳಗೆ ಸಾವು ಕಟ್ಟಿಟ್ಟ ಬುತ್ತಿ. ಬದುಕುವುದೇ ಗುರಿಯಾಗಿ, ಅದಕ್ಕೆ ಏನು ಮಾಡಲೂ ಸಿದ್ಧನಾಗಿ, ತನ್ನ ಮೂತ್ರವನ್ನೇ ಸಂಗ್ರಹಿಸಿ ಕುಡಿಯತೊಡಗಿದ.

ಕೊನೆಗೊಮ್ಮೆ ಉಸುಕಿನ ನೆಲದ ಮಧ್ಯದಲ್ಲೊಂದು ಸಣ್ಣ ಗೋಪುರ ಕಂಡಿತು. 'ಬೆಡೊಯಿನ್' ಎಂಬ ಅಲೆಮಾರಿ ಜನಾಂಗ ತಮ್ಮ ಪ್ರಯಾಣದ ನಡುವೆ ಆಗಾಗ ತಂಗಲು ಬಳಸುತ್ತಿದ್ದ ಜಾಗವದು. ಯಾರಾದರೂ ಮನುಷ್ಯರಿರಲಿ ಎಂದುಕೊಂಡು ಆ ಗೋಪುರದ ಬಳಿ ತೆರಳಿ ಬಾಗಿಲು ತೆಗೆದು ನೋಡಿದರೆ ಮೂಲೆಯಲ್ಲಿರುವ ಸಮಾಧಿಯೊಂದನ್ನು ಬಿಟ್ಟು ಬೇರೇನೂ ಇಲ್ಲ. ಬಿಸಿಲ ಝಳದಿಂದ ತಪ್ಪಿಸಿಕೊಳ್ಳಲು ಸೂರೊಂದು ದೊರಕಿತೆಂಬುದೇ ಅವನ ಭಾಗ್ಯ. ನಿಶ್ಶಕ್ತನಾಗುತ್ತಿದ್ದಂತೆ, ತನ್ನಲ್ಲಿದ್ದ ದಿನಸಿ ಸಾಮಾನುಗಳಿಂದ, ತನ್ನ ಮೂತ್ರವನ್ನೇ ಉಪಯೋಗಿಸಿ ಅಡುಗೆ ಮಾಡಿ ತಿಂದ.

ಬದುಕಲೇಬೇಕೆಂಬ ಆಸೆ ಬಲವಾಗಿತ್ತು. ಆಗ ಕಂಡಿದ್ದು ಕತ್ತಲ ಮೂಲೆಯಲ್ಲಿ ನೇತಾಡುತ್ತಿದ್ದ ಬಾವಲಿಗಳು. ಅವನ್ನೇ ಹಿಡಿದು ತಿಂದು ತನ್ನ ಹಸಿವು ಇಂಗಿಸಿಕೊಂಡ. ಮುಂದೇನೆಂಬ ಚಿಂತೆ ಅವನೆದುರು ಮರಳಿನಂತೆ ಹರಡಿಕೊಂಡಿತ್ತು.

ಮತ್ತೆ ವಿಮಾನ ಹಾರಿದ ಸದ್ದು. ತನ್ನನ್ನು ಹುಡುಕಲು ಬಂದ ವಿಮಾನವೆಂದು, ಆ ಚಾಲಕನ ಗಮನ ಸೆಳೆಯಲು ತಕ್ಷಣವೇ ತನ್ನ ಮಲಗುವ ಚೀಲದಿಂದ ಸಣ್ಣಪುಟ್ಟ ವಸ್ತುಗಳನ್ನು ಸೇರಿಸಿ ಬೆಂಕಿ ಹಚ್ಚಿದ. ದುರದೃಷ್ಟವೆಂದರೆ, ಆ ಸಮಯಕ್ಕೆ ಸರಿಯಾಗಿ ಬಿರುಗಾಳಿ ಪ್ರಾರಂಭವಾಯಿತು. ವಿಮಾನ ಕಂಡು, ಈ ಕಷ್ಟಗಳೆಲ್ಲ ಮುಗಿಯಿತು ಎಂದು ಸಂಭ್ರಮಿಸಿದ ಮೌರೊ, ತನ್ನ ಇರುವನ್ನು ಗುರುತಿಸದೇ ವಿಮಾನ ವಾಪಸಾದಾಗ ಹತಾಶನಾದ. ಕೊನೆಗೆ, ಊಟ, ತಿಂಡಿಗಳಿಲ್ಲದೆ ಹೀಗೆ ನರಳಿ ಸಾಯುವ ಬದಲು ಆತ್ಮಹತ್ಯೆ ಮಾಡಿಕೊಳ್ಳೋಣವೆಂದು ನಿರ್ಧರಿಸಿದ.

ತನ್ನಲ್ಲಿದ್ದ ಚಾಕುವಿನಿಂದ ಕೈ ನರ ಕತ್ತರಿಸಿಕೊಂಡು, ಸಾವನ್ನು ಎದುರು ನೋಡುತ್ತಾ ಹಾಗೇ ಕಣ್ಣುಮುಚ್ಚಿದ. ಆದರೆ ಎಷ್ಟೋ ಹೊತ್ತಿನ ಮೇಲೆ ಎಚ್ಚರಾಗಿ ಕಣ್ಣು ತೆರೆದರೆ, ಆಶ್ಚರ್ಯ! ತಾನಿನ್ನೂ ಅದೇ ಗೋಪುರದ ಒಳಗಿದ್ದ. ಮೊದಲೇ ನೀರಿಲ್ಲದೆ ಮಂದವಾಗಿದ್ದ ಅವನ ರಕ್ತ ನರವನ್ನು ಕತ್ತರಿಸಿಕೊಂಡರೂ ಅಲ್ಲೇ ಹೆಪ್ಪುಗಟ್ಟಿತ್ತು. ಇದನ್ನು ಕಂಡ ಮೌರೊಗೆ, ತಾನು ಸಾಯಲು ಸಿದ್ಧವಾದವನಲ್ಲ ಎಂದು ಅರಿವಾಗಿ, ಮತ್ತೆ ತನ್ನ ಸ್ಥೈರ್ಯವನ್ನೆಲ್ಲ ಒಗ್ಗೂಡಿಸಿ ಗೋಪುರದಿಂದ ಹೊರಬಂದ.

ಈ ಕಡೆ, 5 ದಿನ ಮೌರೊಗಾಗಿ ಹುಡುಕಿದ ರಕ್ಷಣಾ ಪಡೆ, ಕೊನೆಗೂ ಸಿಗದೇ ಆತ ಸತ್ತನೆಂದು ಘೋಷಿಸಿ ರಕ್ಷಣಾ ಕಾರ್ಯಾಚರಣೆ ನಿಲ್ಲಿಸಿತು. ಇತ್ತ ಮೌರೊ ಸಾವು ಬದುಕಿನ ನಡುವೆ ಹೊಯ್ದಾಡುತ್ತ ಕೊನೆಯೇ ಕಾಣದ ಮರಳಿನ ರಾಶಿಯಿಂದ ಹೊರಬರಲು ಶತಪ್ರಯತ್ನ ನಡೆಸುತ್ತಿದ್ದ. ದೃಢಕಾಯಿಯಾಗಿದ್ದ ಮೌರೊನ ಶರೀರ ಎಲ್ಲ ಕಷ್ಟಗಳಿಗೂ ಸ್ಪಂದಿಸಿತು. ಆದರೆ ಹೋಗುವುದೆತ್ತ? ತಕ್ಷಣ ಅವನಿಗೆ ನೆನಪಿಗೆ ಬಂದದ್ದು, ಟ್ಯುರೇಗ್ ಎಂಬ ಅಲೆಮಾರಿ ಜನಾಂಗದವನೊಬ್ಬ ಸ್ಪರ್ಧೆಯ ಪ್ರಾರಂಭದಲ್ಲಿ ಕೊಟ್ಟ ಸಲಹೆ.

'ನೀವು ಮರುಭೂಮಿಯಲ್ಲಿ ಕಳೆದುಹೋದರೆ ಮುಂಜಾನೆ ಕಾಣುವ ಮೋಡಗಳನ್ನು ಹಿಂಬಾಲಿಸಿ. ಅಲ್ಲಿ ಓಯಸಿಸ್ ಸಿಗುವ ಸಾಧ್ಯತೆ ಹೆಚ್ಚು' ಎಂಬ ಸೂಚನೆ ಪಾಲಿಸಿ, ಮೋಡಗಳ ಹಿಂದೆಯೇ ನಡೆದ. ಜೀವ ಉಳಿಸಿಕೊಳ್ಳುವುದೇ ಪರಮ ಉದ್ದೇಶವಾಗಿ, ದಾರಿಯಲ್ಲಿ ಸಿಕ್ಕ ಹಲ್ಲಿ, ಹಾವುಗಳನ್ನೇ ಆಹಾರವಾಗಿಸಿಕೊಂಡು ದೇಹಕ್ಕೆ ಶಕ್ತಿ ತುಂಬಿಕೊಳ್ಳುತ್ತಿದ್ದ. ಅಲ್ಲಲ್ಲಿ ಕಂಡ ಸಣ್ಣ ಗಿಡಗಳನ್ನು ಹಿಂಡಿ ಅವುಗಳ ರಸ ಹೀರಿ ದಾಹ ತೀರಿಸಿಕೊಳ್ಳುತ್ತಿದ್ದ.

ಅದಾಗಲೇ ಆರು ದಿನಗಳು ಕಳೆದಿದ್ದವು. ಮೌರೊ ದೇಹ ಬಹಳಷ್ಟು ಹದಗೆಟ್ಟಿತ್ತು. ನೀರಿನಂಶ ಕಡಿಮೆಯಾಗಿದ್ದರಿಂದ ಮೂತ್ರ ವಿಸರ್ಜನೆ ಮಾಡುವುದು ಅವನಿಂದ ಸಾಧ್ಯವಾಗದಾಯಿತು. ಆದರೂ ಕಾಲೆಳೆಯುತ್ತಾ ಮೋಡಗಳನ್ನೇ ಹಿಂಬಾಲಿಸುತ್ತಾ ಸಾಗಿದ. ಎಂಟನೇ ದಿನ ಒಂದು ದೊಡ್ಡ ಓಯಸಿಸ್ ಎದುರಾಯಿತು. ಹೋದ ಜೀವ ಬಂದಂತೆ!. ಆರೇಳು ತಾಸು ಅಲ್ಲೇ ಕುಳಿತು ನೀರು ಕುಡಿದ. ಅಲ್ಲೇ ಮನುಷ್ಯರ ಹೆಜ್ಜೆ ಗುರುತು ಕಂಡವು. ಮರುದಿನ, ದೂರದಲ್ಲಿ ಆಡು ಮೇಯಿಸುತ್ತಿದ್ದ ಚಿಕ್ಕ ಹುಡುಗಿ ಕಂಡಳು. ಕೃಶಕಾಯನಾಗಿ, ದೂಳು, ಮರಳಿನಿಂದ ವಿಚಿತ್ರವಾಗಿದ್ದ ಮೌರೊ ನೋಡಿ ಗಾಬರಿಯಾದ ಆ ಹುಡುಗಿ, ತಮ್ಮ ಗುಡಿಸಲ ಹೆಂಗಸರನ್ನು ಕರೆತರಲು ಓಡಿದಳು. ಅವರು ಅವನನ್ನು ಕೂರಿಸಿ ಕುಡಿಯಲು ಆಡಿನ ಹಾಲು ಕೊಟ್ಟು ಉಪಚರಿಸಿದರು. ನಂತರ ಪೊಲೀಸರಿಗೆ ವಿಷಯ ಮುಟ್ಟಿಸಿತು.

ಸ್ಪರ್ಧೆ ನಡೆಯುತ್ತಿದ್ದ ಜಾಗದಿಂದ ಸುಮಾರು 291 ಕಿ.ಮೀ.ಗಳಷ್ಟು ದೂರಕ್ಕೆ ಅಲ್ಜೀರಿಯಾ ದೇಶದ ಗಡಿ ದಾಟಿ ಬಂದಿದ್ದ ಮೌರೊ. ಅಲ್ಲಿನ ಪೊಲೀಸರು ಇವನು ಯಾರೆಂದು ತಿಳಿಯದ ಕಾರಣ ಕಣ್ಣಿಗೆ ಬಟ್ಟೆ ಕಟ್ಟಿ ತಮ್ಮ ಮಿಲಿಟರಿ ನೆಲೆಗೆ ಕರೆದೊಯ್ದರು. ಮೊರಾಕ್ಕೋದಿಂದ ಹಾದಿತಪ್ಪಿ ಬಂದ ಮ್ಯಾರಥಾನ್ ಓಟಗಾರ ಎಂದು ತಿಳಿದ ತಕ್ಷಣ ಆಸ್ಪತ್ರೆಗೆ ಸೇರಿಸಿದರು. ಅಷ್ಟರಲ್ಲಿ ಅವನ ತೂಕ 45 ಕೆ.ಜಿ.ಗೆ ಇಳಿದಿತ್ತು. ಮೌರೊ ಬದುಕಿದ್ದ ವಿಷಯ ಆತನ ಮನೆಯವರಿಗೆ ತಲುಪಿತು. ನಿಧಾನವಾಗಿ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ಮೇಲೆ ಇಟಲಿಗೆ ವಾಪಸು ಕಳಿಸಲಾಯಿತು. ಸಾವಿನೊಡನೆ ಸೆಣಸಿ ಗೆದ್ದು ಬಂದಿದ್ದ ಮೌರೊಗೆ ತನ್ನ ತವರಿನಲ್ಲಿ ಅಭೂತಪೂರ್ವ ಸ್ವಾಗತ ಸಿಕ್ಕಿತು.

ಇದಾದ ಕೆಲವೇ ವರ್ಷಗಳಲ್ಲಿ ಮತ್ತೆ ಮೊರಾಕ್ಕೋದ ಮರಳುಗಾಡಿನಲ್ಲಿ ನಿಂತಿದ್ದ ಮೌರೊ. ಏಕೆಂದು ಕೇಳಿದವರಿಗೆ ಅವನಲ್ಲೇ ಉತ್ತರ ಕಾಣುತ್ತದೆ.

ಶುರುಮಾಡಿದ್ದನ್ನು ಅರ್ಧಕ್ಕೆ ನಿಲ್ಲಿಸುವ ಸ್ವಭಾವ ಅವನದಲ್ಲ. ಮ್ಯಾರಥಾನ್ ಡೆಸ್ ಸೇಬಲ್ಸ್ ಪೂರ್ತಿಗೊಳಿಸಲೇಬೇಕೆಂಬ ಹಟ ಹಾಗೂ ಮರುಭೂಮಿ ಮೇಲೆ ಬೆಳೆದಿದ್ದ ಅಕ್ಕರೆ ಮತ್ತೆ ಅವನನ್ನು ಇಲ್ಲಿಗೆ ತಂದುನಿಲ್ಲಿಸಿತ್ತು. ಮುಂದೆ 6 ಬಾರಿ ಈ ಸ್ಪರ್ಧೆಯಲ್ಲಿ ಭಾಗವಹಿಸಿದರೂ ಮೊದಲ ಮ್ಯಾರಥಾನ್ ಮಾತ್ರ ಮೌರೊ ಪಾಲಿಗೆ ಮರೆಯಲಾಗದ್ದು. 'ನೀನಿನ್ನೂ ಸಾಹಸಗಳ ಬೆನ್ನತ್ತಿ ಬದುಕುತ್ತಿರುವೆಯಲ್ಲ' ಎಂಬ ಸ್ನೇಹಿತನ ಪ್ರಶ್ನೆಗೆ, 'ಹೌದು. ಸದ್ಯಕ್ಕೆ ನನ್ನ ಜೀವನ ಸಾಹಸಯಾತ್ರೆಯೇ. ವಯಸ್ಸಾದ ಮೇಲೆ ಬದುಕನ್ನು ಸ್ವಲ್ಪ ನಿಧಾನವಾಗಿ ತೆಗೆದುಕೊಳ್ಳುತ್ತೇನೆ' ಎಂದು ನಗುತ್ತಾನೆ 67ರ ಆಸುಪಾಸಿನ ಪ್ರಾಸ್ಪೆರಿ.

ಪ್ರತಿಕ್ರಿಯಿಸಿ: feedback@sudha.co.in



1994ರಲ್ಲಿ ನಡೆದ 'ಮ್ಯಾರಥಾನ್ ಡೆಸ್ ಸೇಬಲ್ಸ್'ನಲ್ಲಿ ಸಹಸ್ಪರ್ಧಿಗಳೊಂದಿಗೆ ಮೌರೊ ಪ್ರಾಸ್ಪೆರಿ (ಎಡದಿಂದ ಎರಡನೆಯವರು)